**ದಿನಾಂಕಃ 18.09.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ ಜಿ ಜಿ ಜಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ಎಫ್ ಐ ಆರ್ ನ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ-1

ದೂರಿನ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು -ನಿಪಿ-2

ಶವ ಪರೀಕ್ಷಾ ವರದಿಯ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ-3

ಐ ಎಂ ವಿ ವರದಿಯ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ-4

ನನ್ನ ಆಧಾರ್ ಕಾರ್ಡ್ ಪ್ರತಿಯನ್ನು ನಿಪಿ-5

ತಾಯಮ್ಮ ಇವರ ಆಧಾರ್ ಕಾರ್ಡ್ ಪ್ರತಿಯನ್ನು ನಿಪಿ-6

ಮಂಜುನಾಥರವರ ಆಧಾರ್ ಕಾರ್ಡ್ ಪ್ರತಿಯನ್ನು ನಿಪಿ-7

ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ-8

ನಾಕಶೆಯ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ-9

ಶವ ತನಿಖಾ ವರದಿಯ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ-10

ಚಾರ್ಜ್ ಶೀಟ್ ನ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ನಿಪಿ-11 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 4 ನೇ ಎದುರುದಾರರ ಪರ ಶ್ರೀ ಬಿ ಎಂ ಆರ್ ಸಿ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಮೃತ ನನ್ನ ಮಗ ಮಂಜುನಾಥರವರಿಗೆ ಮದುವೆ ಆಗಿಲ್ಲ. ನನಗೆ ಮಂಜುನಾಥ ಒಬ್ಬನೇ ಮಗ . ಅಪಘಾತವಾದಾಗ ಕೆಎ 06 ಹೆಚ್ 9939 ನ್ನು ನನ್ನ ಮಗ ಮಂಜುನಾಥ ಚಾಲನೆ ಮಾಡುತ್ತಿದ್ದರು. ಅವರು ವಾಹನವನ್ನು ನಿಧಾನವಾಗಿ ಚಾಲನೆ ಮಾಡುತ್ತಿದ್ದರು. ಸದರಿ ಮೋಟರ್ ಸೈಕಲ್ ಮಂಜುನಾಥನ

ಸ್ನೇಹಿತನಿಗೆ ಸೇರಿದೆ. ಅಪಘಾತದ ಸಂಬಂಧ ಹೆಬ್ಬೂರು ಪೊಲೀಸಿನವರು ಪ್ರಕರಣ ದಾಖಲಿಸಿದ್ದಾರೆ ಎಂದರೆ ನಿಜ. ಹೆಬ್ಬೂರು ಪೊಲೀಸಿನವರು ಸಲ್ಲಿಸಿದ ದೋಷಾರೋಪಣಾ ಪಟ್ಟಿ ಯಲ್ಲಿ ನನ್ನ ಮಗ ಮಂಜುನಾಥನನ್ನು 2 ನೇ ಆರೋಪಿಯಾಗಿ ಸೇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಚಾಲನೆ ಮಾಡುತ್ತಿದ್ದ ಮೋಟರ್ ಸೈಕಲ್ ನ ಮಾಲೀಕರ ಹೆಸರು ಫೈರೋಜ್ ಅಹಮದ್ ಎಂದರೆ ನಿಜ. ಸದರಿ ಫೆರೋಜ್ ಅಹಮದ್ ರವರನ್ನು 3 ನೇ ಆರೋಪಿಯಾಗಿ ದೋಷಾರೋಪಣಾ ಪಟ್ಟಿ ಯಲ್ಲಿ ಸೇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದೋಷಾರೋಪಣಾ ಪಟ್ಟಿ ಯಲ್ಲಿ ನನ್ನ ಮಗನಿಗೆ ಚಾಲನಾ ಪರವಾನಿಗಿ ಇರುವುದಿಲ್ಲ ಅವರು ಮಧ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುತ್ತಿದ್ದರು ಎಂದು ನಮೂದು ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ನನ್ನ ಮಗ ಕುಡಿಯುತ್ತಿರಲಿಲ್ಲ ಎಂದು ನುಡಿಯುತ್ತಾರೆ. ದೋಷಾರೋಪಣಾ ಪಟ್ಟಿ ತಪ್ಪಾಗಿದೆ ಎಂದು ನಾನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ. ನಾನು ಲಾರಿಯ ಮಾಲೀಕ ಮತ್ತು ವಿಮಾದಾರನ ಮೇಲೆ ಪರಿಹಾರ ಕೇಳಿರುತ್ತೇನೆ.

ನನ್ನ ಮಗ ಸಂಪಾದನೆ ಮಾಡಿ ತಿಂಗಳಿಗೆ ರೂ.30 ಸಾವಿರ ಹಣ ಗಳಿಸುತ್ತಿದ್ದ ಎಂದು ನಾನು ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ತಪ್ಪಿನಿಂದ ಈ ಆಪಪಘಾತವಾಗಿರುವುದರಿಂದ 4 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ.

**<u>2 ಮತ್ತು 3 ನೇ ಎದುರುದಾರರ ಪಾರ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು